ನಿನ್ನೆಯೇ ಕ್ರಮ ತೆಗೆದುಕೊಂಡಿದ್ದೇನೆ. ಕೇಂದ್ರ ಸರಕಾರಕ್ಕೆ ತಿಳಿಸಬೇಕೆನ್ನುವುದಕ್ಕೆ ನಿನ್ನೆ ನನ್ನ ಹತ್ತಿರ ಕಡತ ಬಂದಿತ್ತು ನಾನು ಅದನ್ನು ಕಳುಹಿಸಲು ಏರ್ಪಾಟು ಕೂಡ ಮಾಡಿದ್ದೇನೆ. ಗೊಬ್ಬರದ ಬೆಲೆ ಬಗ್ಗೆ, ಬೆಲೆ ನಿಗದಿ ಪಡಿಸುವ ಬಗ್ಗೆ ಹೇಳಿದ್ದೇನೆ. ಈ ರಾಜ್ಯದಲ್ಲಿ ಕಳ್ಳ ದಾಸ್ತಾನು ಮಾಡಿರತಕ್ಕಂತಹವರ ಬಗ್ಗೆ ಏನೇನು ಕ್ರಮ ತೆಗೆದುಕೊಂಡಿದ್ದೇವೆ ಎಷ್ಟು ಗೊಬ್ಬರ ಸರಬರಾಜು ಆಗಬೇಕಾಗಿತ್ತು ಏನೇನಾಗಬೇಕಾಗಿತ್ತು ಎನ್ನುವ ಬಗ್ಗೆ ವಿವರವಾದ ಹೇಳಿಕೆಯನ್ನು ಮತ್ತು ಮಾನ್ಯ ಬಂದಾರಪ್ಪನವರು ತಿಳಿಸಿರತಕ್ಕಂತಹ ವಿಚಾರದ ಬಗ್ಗೆ ವಿವರವಾದ ಹೇಳಿಕೆಯನ್ನು ಸಾಧ್ಯವಾದರೆ ಇವತ್ತು ಇಲ್ಲವೇ ನಾಳೆ ದಿವಸ ಹೇಳಿಕೆಯನ್ನು ಮಾಡುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ.

ಅಧ್ಯಕ್ಷರು :- ಮಾನ್ಯ ಕಂದಾಯ ಸಚಿವರು ಎರಡು ಸಣ್ಣ ವಿಧೇಯಕಗಳನ್ನು ಮಂಡಿಸಬೇಕಾಗಿದೆ. ಗಮನ ಸೆಳೆಯುವ ಸೂಚನೆಯನ್ನು ನಂತರ ತೆಗೆದುಕೊಳ್ಳೋಣ. 1-30ಗೆ ಊಟಕ್ಕೆ ಅಡ್ಜರ್ನ್ ಮಾಡಬೇಕಾಗಿದೆ.

ಶ್ರೀ ಬಿ. ಸೋಮಶೇಖರ್ :- ನಾನು ಮುಖ್ಯ ಮಂತ್ರಿಗಳ ಖಾತೆಗೆ ಸಂಬಂಧಿಸಿದಂತೆ ಗಮನ ಸೆಳೆಯುವ ಸೂಚನೆ ನಿನ್ನೆ ಕೊಟ್ಟಿದ್ದೇನೆ. ಅವರು ಹೇಳಿಕೆ ಕೊಡುತ್ತೇವೆಂದು ಹೇಳಿದ್ದಾರೆ.

ಅಧ್ಯಕ್ಷರು :- ತಾವು ನಿನ್ನೆ ನೋಟೀಸ್ ಕೊಟ್ಟಿದ್ದೀರಿ. ಇವತ್ತು ಅದನ್ನು ಪ್ರಸ್ತಾಪ ಮಾಡುವುದು ಇತ್ತು. ವಿದೇಶೀ ನಿಯೋಗ ಒಂದು ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ಇದ್ದಾಗ ನಿಮಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಕಾಲಿಂಗ್ ಅಟೆನ್ಷನ್, 351 ನಂತರ ತೆಗೆದುಕೊಳ್ಳುತ್ತೇನೆ. ಮಾನ್ಯ ಕಂದಾಯ ಸಚಿವರಿಗೆ ಸಂಬಂಧಿಸಿದ 2 ವಿಧೇಯಕಗಳು ಇವೆ. 3 ಗಂಟೆಗೆ ಅವರು ವಿಧಾನ ಪರಿಷತ್ತಿಗೆ ಹೋಗಬೇಕೆಂದು ನನ್ನಲ್ಲಿ ವಿನಂತಿ ಮಾಡಿ ಕೊಂಡಿದ್ದಾರೆ. ಆ ಎರಡು ವಿಧೇಯಕಗಳನ್ನು ಈಗ ಪರ್ಯಾಲೋಚನೆಗೆ ತೆಗೆದುಕೊಳ್ಳೋಣ.

ಶಾಸನಾ ರಚನಾ ಕಾರ್ಯಕಲಾಪಗಳು

(ಪರ್ಯಾಲೋಚನಾ ಪ್ರಸ್ತಾವ)

(1) ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಮುಗಳ ರದ್ದಿಯಾತಿ (ಕರ್ನಾಟಕ ತಿದ್ದುಪಡಿ) ವಿಧೇಯಕ 1995.

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಮುಗಳ ರದ್ದಿಯಾತಿ (ಕರ್ನಾಟಕ ತಿದ್ದುಪಡಿ) ವಿಧೇಯಕ 1995 ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಸಚಿವರು) :- ತಸ್ಟೀಕ್ ಹಣವನ್ನು ಜಿಲ್ಲಾಧಿಕಾರಿಗಳು ನಿಗದಿ ಮಾಡುತ್ತಾರೆ. ಅದೇ ಫೈನಲ್ ಅಪೀಲಿಗೆ ಡಿವಿಜನಲ್ ಕಮೀಷನರ್‌ಗೆ ಪ್ರಾವಿಷನ್ ಮಾಡಿಕೊಟ್ಟಿದ್ದೇವೆ. ಬೇರೇನೂ ಇಲ್ಲ.

ಅಧ್ಯಕ್ಷರು :- ಪ್ರಸ್ತಾವವೇನೆಂದರೆ :- " ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಮುಗಳ ರದ್ದಿಯಾತಿ (ಕರ್ನಾಟಕ ತಿದ್ದುಪಡಿ) ವಿಧೇಯಕ 1995 ನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ 2 ಪ್ರಸ್ತಾವ ಏನೆಂದರೆ :-

ಅಧ್ಯಕ್ಷರು :- "ಖಂಡ 2 ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(**ಖಂಡ 2 ಅನ್ನು** ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ :-

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

1.20 ಪಿ. ಎಂ

ಪ್ರಸ್ತಾವದ ಅಂಗೀಕಾರ

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೇ, 1995ರ ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಮುಗಳ ರದ್ದಿಯಾತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ : "1995 ರ ಮೈಸೂರು (ಧಾರ್ಮಿಕ ಮತ್ತು ಧರ್ಮಾದಾಯ) ಇನಾಮುಗಳ ರದ್ದಿಯಾತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(2) ಕರ್ನಾಟಕ ವಿಶೇಷ ನ್ಯಾಯಾಧಿಕರಣ (ತಿದ್ದುಪಡಿ) ವಿಧೇಯಕ, 1995

ಪರ್ಯಾಲೋಚನಾ ಪ್ರಸ್ತಾವ